ಶ್ರೀ ಎಸ್. ಶ್ರೀನಿವಾಸಯ್ಯಂಗಾರ್.—ಮಾನ್ಯ ಮಂತ್ರಿಗಳು ಮಂತ್ರಿಪದವಿಯನ್ನು ಅಲಂಕರಿಸಿದ 115 ದಿವಸಗಳಲ್ಲಿ 82 ದಿವಸಗಳು 12,812 ಮೈಲಿಗಳನ್ನು ಸಂಚಾರಮಾಡುವುದಕ್ಕೆ ಏನು ಅಗತ್ಯವಿತ್ತು?

*ಶ್ರೀ ಕೆ. ಹನುಮಂತಯ್ಯ.—ಜನಗಳು ಅವರು ಎಲ್ಲೆಲ್ಲಿ ಬರಬೇಕೆಂದು ಅಪೇಕ್ಷೆಮಾಡಿದರೋ ಅಲ್ಲಿಯ ಜನಗಳ ಅಪೇಕ್ಷೆಯನ್ನು ಅವರು ಮನ್ನಿಸಿದ್ದಾರೆ.

ಶ್ರೀ ಎಸ್. ಶ್ರೀನಿವಾಸಯ್ಯಂಗಾರ್.—ಜನಗಳ ಆಹ್ವಾನದ ಮೇರೆ ಭೇಟಿ ಇತ್ತಂತಹ ಮಾನ್ಯ ಮಂತ್ರಿಗಳು ಹೋದಕಡೆ ಜನಗಳು ಬಿನ್ನವತ್ತಳೆಗಳನ್ನು ರಜತ ಕರಂಡಗಳನ್ನು ಏನಾದರೂ ಕೊಟ್ಟರೆ?

ಶ್ರೀ ಕೆ. ಹನುಮಂತಯ್ಯ.—ಅದು ತಮಗೆ ಗೊತ್ತಿರಬೇಕು.

ಶ್ರೀ ಎಸ್. ಶ್ರೀನಿವಾಸಯ್ಯಂಗಾರ್.—ಅಂತಹ ಸಂದರ್ಭಗಳಲ್ಲಿ ಜನಗಳ ಬೇಡಿಕೆಗಳನ್ನು ಎಲ್ಲಾ ಅಲ್ಲಲ್ಲಿ ಮುಂಜೂರುಮಾಡಿ ತಾಲ್ಲೂಕು ಅಧಿಕಾರಿಗಳಿಗೆ ಹುಕುಂಗಳನ್ನು ಸಾದರುಮಾಡಿದ್ದಾರೆಯೇ?

ಶ್ರೀ ಕೆ. ಹನುಮಂತಯ್ಯ.—ಅದು ನನಗೆ ಗೊತ್ತಿಲ್ಲ.

ಶ್ರೀ ಎಸ್. ಶ್ರೀನಿವಾಸಯ್ಯಂಗಾರ್.—ಈ ಅವಧಿಯಲ್ಲಿ ಅವರಿಗೆ T. A. ಮತ್ತು D. A. ಕೊಟ್ಟಿರತಕ್ಕ ಮೊಬಲಗು ಅವರಿಗೆ ಪಾವತಿಯಾದ ಸಂಬಳಕ್ಕಿಂತ ಹೆಚ್ಚಾಗಿದೆಯೇ, ಕಡಿಮೆಯಾಗಿದೆಯೇ?

ಶ್ರೀ ಕೆ. ಹನುಮಂತಯ್ಯ.—ಹಾಗಲ್ಲ. ವಿದ್ಯಾದಾನ-ಭೂದಾನ ಚಳುವಳಿ ಸಂಬಂಧದಲ್ಲಿ 15 ದಿವಸಗಳ tour ಮಾಡಿದ್ದು ಇದರಲ್ಲಿ ಸೇರಿದೆ. ಆಗ T. A. ಮತ್ತು D. A. draw ಮಾಡುವುದಿಲ್ಲ ಎಂದು ಹೇಳಿ ಸ್ಕೂಲುಗಳಿಗೆ ಕೊಟ್ಟಿದ್ದಾರೆ. ಆದ್ದರಿಂದ ಎಲ್ಲಾ ದಿವಸಗಳ T. A. ಮತ್ತು D. A ಎಂದು ಹೇಳುವುದಕ್ಕಾಗುವುದಿಲ್ಲ.

ಶ್ರೀ ಎಸ್. ಶ್ರೀನಿವಾಸಯ್ಯಂಗಾರ್.—ದೆಹಲಿಯಲ್ಲಿ ಸೆಪ್ಟೆಂಬರ್ ತಿಂಗಳಲ್ಲಿ 1ನೇ ತಾರೀಖಿನಿಂದ 11ನೇ ತಾರೀಖಿನವರೆಗೆ ಇದ್ದರು ಎಂದು ಉತ್ತರ ಕೊಟ್ಟಿದ್ದೀರಿ. ಅವರು ಏನು ಕೆಲಸಕ್ಕೋಸ್ಕರ ಅಲ್ಲಿ ಇದ್ದರು?

ಶ್ರೀ ಕೆ. ಹನುಮಂತಯ್ಯ.—Five-Year Plan finalise ಮಾಡುವುದಕ್ಕೋಸ್ಕರ ಇದ್ದರು.

ಶ್ರೀ ಎಸ್. ಶ್ರೀನಿವಾಸಯ್ಯಂಗಾರ್.—ಸಂಚಾರ ಮಾಡಿದ ಕಾಲದಿಲ್ಲಿ ಬಹಳವಾಗಿ ಸರ್ಕಾರೀ ಕೆಲಸಗಳಿಗೆ ತೊಂದರೆಯಾಗಿದೆ ಎಂಬುದು ಗೊತ್ತಿದೆಯೇ?

ಶ್ರೀ ಕೆ. ಹನುಮಂತಯ್ಯ.—ತೊಂದರೆಯಾಗಿದೆ ಎಂದು ಸರ್ಕಾರದ ಗಮನಕ್ಕೆ ಬಂದರೆ ಸೂಕ್ತವಾದ ಸಲಹೆಗಳನ್ನು ಕೊಡೋಣ.

ಶ್ರೀ ಎಸ್. ಶ್ರೀನಿವಾಸಯ್ಯಂಗಾರ್.—ಮಂತ್ರಿಗಳು ಸಂಚಾರಮಾಡಿದ ಕಾಲದಲ್ಲಿ 69 ಜನ ಗೆಜೆಟೆಡ್ ಆಫೀಸರುಗಳು ಜೊತೆಯಲ್ಲಿ ಸಂಚಾರ ಮಾಡತಕ್ಕದ್ದು ಪ್ರಜಾಪ್ರಭುತ್ವ ತತ್ವದಲ್ಲಿ ಅಷ್ಟು ಸಾಧುವಾಗಿಲ್ಲ ಎಂಬುದು ಗೊತ್ತಿದೆಯೇ?

Sri K. HANUMANTHAIYA.—That is commentary. Anyway, 69 ಗೆಜೆಟೆಡ್ ಆಫೀಸರುಗಳು ಹೋಗಿದ್ದರು ಎಂಬುದು ಕರಾರುವಾಕ್ಕಾಗಿ ಗೊತ್ತಿಲ್ಲ.

ಶ್ರೀ ಎಸ್. ಶ್ರೀನಿವಾಸಯ್ಯಂಗಾರ್.—ಜವಾಬು ನಲ್ಲಿ ಇದೆ.

ಶ್ರೀ ಎಚ್. ಕೆ. ಶಿವರುದ್ರಪ್ಪ.—23 ದಿವಸಗಳು ಮೈಸೂರು ಡಿಸ್ಟ್ರಿಕ್ಟ್‌ನಲ್ಲಿ ಪ್ರವಾಸಮಾಡಿದ್ದಾರೆ ಎಂದು ಹೇಳಿದ್ದೀರಿ. ಅದರಲ್ಲಿ 15 ದಿವಸಗಳು ಭೂದಾನಕ್ಕಾಗಿ ಮಾತ್ರ ಬಂದಿದ್ದಾರೆ ಎಂಬುದು ತಮಗೆ ಗೊತ್ತಿದೆಯೇ?

Sri K. HANUMANTHAIYA.—Anyway to avoid all controversy, I may state that the Ministers have again discussed this question. We have decided not to tour the same district; we have come to some understanding and hereafter we will not tour unnecessarily; and when it is absolutely necessary and as the Honourable Member knows when the people of the locality persistently make requests for the Ministers to go there for some purpose, it is only then we have to comply with those requests. I concede we need not tour too much and make all these officers accompany the Ministers also.

ಶ್ರೀ ಎಂ. ಮಾದಯ್ಯ.—ಇವರ tourನಿಂದ ಮೈಸೂರು ಜಿಲ್ಲೆಗೆ ಬಹಳಮಟ್ಟಿಗೆ ಸಹಾಯವಾಗಿದೆ ಎಂಬುದು ಸರ್ಕಾರದವರಿಗೆ ಗೊತ್ತಿದೆಯೇ?

ಶ್ರೀ ಕೆ. ಹನುಮಂತಯ್ಯ.—ತಮ್ಮ ಅಭಿಪ್ರಾಯ ಒಪ್ಪಿಕೊಳ್ಳುತ್ತೇನೆ.

ಶ್ರೀ ಎಂ. ಮಾದಯ್ಯ.—ಮಂತ್ರಿವರ್ಯರು ಅವರ ಜೊತೆಯಲ್ಲಿ ಹೋಗಿರತಕ್ಕ ಇತರರ ಬಗ್ಗೆ ಖರ್ಚು ಮಾಡಿರುವುದು ಅವರು T. A. ಮತ್ತು D. A. draw ಮಾಡಿರತಕ್ಕ ಮೊಬಲಗಿಗಿಂತ ಜಾಸ್ತಿಯಾಗಿದೆ. ಎಂದು ಹೇಳಬೇಕೇ?

(ಉತ್ತರವಿಲ್ಲ).

ಶ್ರೀ ಎಂ. ಮಾದಯ್ಯ.—ಈ ಆಫೀಸರುಗಳು ಅವರ ಜೊತೆಯಲ್ಲಿ ಹೋಗಿದ್ದುದರಿಂದ ನಾನಾ ಇಲಾಖೆಗಳ ಕೆಲಸಗಳು ಬೇಗ ಬೇಗ ಆಗಿ ಬಹಳಮಟ್ಟಿಗೆ ಸಹಾಯವಾಗಿರುವುದು ಸರ್ಕಾರದ ಗಮನಕ್ಕೆ ಮತ್ತು ಈ ಸಭೆಯ ಗಮನಕ್ಕೆ ಬಂದಿದೆಯೇ?

ಶ್ರೀ ಕೆ. ಹನುಮಂತಯ್ಯ.—ನಿಜ, ಸ್ವಾಮಿ.

ಶ್ರೀ ಎಚ್. ಕೆ. ವೀರಣ್ಣಗೌಡ.—ಮುಖ್ಯಮಂತ್ರಿಗಳು ಉತ್ತರಕೊಡುತ್ತಾ "We will not tour unnecessarily hereafter" ಎಂದು ಹೇಳಿದರು. ಹಾಗಾದರೆ ಇದುವರೆಗೂ unnecessary ಆಗಿ tour ಮಾಡಿದ್ದಾರೆ ಎಂದು ಅರ್ಥವಾಗುವುದಿಲ್ಲವೇ?

(ನಗು)

Agreement between Government of India and ex-Ruler of Sandur.

Q.—255. Sri K. KOTRA BASAVANA GOUD (Kudligi).—

Will the Government be pleased to state:—

(*a*) the details of Agreement between the Government of India and the ex-ruler of Sandur;

(*b*) the extent of land, forest, mines, buildings, etc., given to him and for what purpose and under what conditions;

(*c*) the extent of forest cut by him in 1954-55 and 1955-56?

A.—Sri K. HANUMANTHAIYA (Chief Minister).—

(*a*) *Vide* copy placed on the Table of the House. (Copy placed in library *vide* No. 34—L.A., dated 19th November 1955.)

(*b*) and (*c*) Cannot be disclosed, being confidential.

ಶ್ರೀ ಕೊಟ್ರ ಬಸವನಗೌಡ.—ಈ ಕರಾರನ್ನು ರಹಸ್ಯವಾಗಿ ಇಟ್ಟಿರುವುದಕ್ಕೆ ಏನು ಕಾರಣ ?

*ಶ್ರೀ ಕೆ. ಹನುಮಂತಯ್ಯ.—ರಹಸ್ಯವಾಗಿಟ್ಟಿರುವುದೇ ಕಾರಣ.

ಶ್ರೀ ಕೊಟ್ರ ಬಸವನಗೌಡ.—ಅದನ್ನು publish ಮಾಡುವುದರಿಂದ ಏನು ಬಾಧಕ ?

ಶ್ರೀ ಕೆ. ಹನುಮಂತಯ್ಯ.—ಭಾರತ ಸರ್ಕಾರದವರೊಂದಿಗೆ ಕರಾರು ಆದ ಪ್ರಕಾರ ಎಲ್ಲಾ ರಾಜರುಗಳ private property confidential matter ಆಗಿರುತ್ತದೆ. ಅದು private property ಆಗಿರುವುದರಿಂದ, ನಾವು ಅಸೆಂಬ್ಲಿಯಲ್ಲಿ ಯಾವ private propertyಯೂ ಇದೆ ಎಂದು ಹೇಳುವುದು ಮತ್ತು ಅದರ ಬಗ್ಗೆ ಪ್ರಸ್ತಾಪಮಾಡುವುದು ಸೂಕ್ತವಲ್ಲ.

ಅಧ್ಯಕ್ಷರು.—ಹೋದಸಲವೂ ಈ ಪ್ರಶ್ನೆಯನ್ನು ಕೇಳಿದ್ದೀರಿ.

ಶ್ರೀ ಕೊಟ್ರ ಬಸವನಗೌಡ.—Details ಕೊಟ್ಟಿರಲಿಲ್ಲ. ಅದಕ್ಕಾಗಿ ಈಗ ಕೇಳಿದ್ದೇನೆ. Confidential ಆಗಿ ಇಟ್ಟಿರುವುದರಿಂದ ಈ ಕರಾರಿನ rulesಗಳನ್ನು violate ಮಾಡಿದರೆ ಅಥವಾ ಅಕ್ರಮಮಾಡಿದರೆ ಯಾರು ತನಿಖೆ ಮಾಡಬೇಕು?

ಶ್ರೀ ಕೆ. ಹನುಮಂತಯ್ಯ.—ಭಾರತ ಸರ್ಕಾರದವರು ಅದರ ಕೊನೆ ತೀರ್ಮಾನಮಾಡುತ್ತಾರೆ. ಈ ವಿಷಯದಲ್ಲಿ ಕರಾರು violate ಆಗಿದೆ ಎಂದು ತಮಗೆ ತಿಳಿದು ಬಂದರೆ ತಿಳಿಸಿ. ಅದನ್ನು ಸಂಬಂಧಪಟ್ಟ ಅಧಿಕಾರ ವರ್ಗಕ್ಕೆ ಕಳುಹಿಸುತ್ತೇವೆ.

ಶ್ರೀ ಕೊಟ್ರ ಬಸವನಗೌಡ.—ಕರಾರು ವಿಷಯದೇ ಗೊತ್ತಿಲ್ಲ. violate ಮಾಡಿದ್ದರೆ ಹೇಳಬಹುದು ಎಂದು ಹೇಳುತ್ತೀರಿ. ತಪ್ಪುಮಾಡಿದರೆ ಯಾರು ಹೇಳಬೇಕು, ಮತ್ತು ಅವರು ತಪ್ಪುಮಾಡಿದ್ದಾರೆಂದು ಹೇಗೆ ಗೊತ್ತಾಗುತ್ತದೆ ?

ಶ್ರೀ ಕೆ. ಹನುಮಂತಯ್ಯ.—ಇದುವರೆಗೂ ಯಾರೂ ಆ ರೀತಿ ಮಾಡಿಲ್ಲ.

ಶ್ರೀ ಕೊಟ್ರ ಬಸವನಗೌಡ.—ಅರಣ್ಯವನ್ನು ಎಷ್ಟೋ ಕಡಿದು ಎರಡು ವರ್ಷಗಳಿಂದ ಅವರು ತಪ್ಪುಮಾಡಿದ್ದಾರೆ. ಹೀಗಿದ್ದರೂ ಕರಾರನ್ನು ರಹಸ್ಯವಾಗಿ ಇಡಬೇಕೆ ?

ಶ್ರೀ ಕೆ. ಹನುಮಂತಯ್ಯ.—ತಪ್ಪು ಮಾಡಿದ್ದರೆ ಸರ್ಕಾರದವರು ಅದನ್ನು ವಿಚಾರ ಮಾಡುತ್ತಾರೆ.

Mr. SPEAKER.—The point is this when the agreement is not before the public, how to understand whether they have committed faults or not ?

ಶ್ರೀ ಕೊಟ್ರ ಬಸವನಗೌಡ.—ಅವರಿಗೆ ಕೆಲವು forest areaಗಳನ್ನು hunting purposes ಗೆ ಕೊಟ್ಟಿದ್ದಾರೆ. ಅಲ್ಲಿಂದ ಪ್ರತಿದಿವಸವೂ 10-20 ಲಾರಿಗಳಷ್ಟು ಕಾಡನ್ನು ಕಡಿದು ಸಾಗಿಸುವುದರಿಂದ ದೇಶಕ್ಕೆ ನಷ್ಟವಾಗುವುದಿಲ್ಲವೇ ?

ಶ್ರೀ ಕೆ. ಹನುಮಂತಯ್ಯ.—ಆ ರೀತಿಯಾದ Information ನನ್ನ ಗಮನಕ್ಕೆ ಬಂದಿಲ್ಲ. ವಿಚಾರ ಮಾಡಿ ನೋಡೋಣ.

Gazetted Officers over 35 years of service in Hassan District.

Q.—483. Sri K. PANCHAKSHARAIAH (Arsikere).—

Will the Government be pleased to state :—

(*a*) the number of Gazetted officers over 35 years of service in Hassan District ;

(*b*) the names of such officers ;

(*c*) the number out of above to whom extensions have been granted ;

(*d*) the special reasons for granting such extensions ?

A.—Sri K. HANUMANTHAIYA (Chief Minister).—

(*a*) Nil.

(*b*), (*c*) and (*d*) Do not arise in view of reply to (*a*).

ಶ್ರೀ ಕೆ. ಪಂಚಾಕ್ಷರಯ್ಯ.—ನನ್ನ (*a*) ಪ್ರಶ್ನೆಗೆ ಉತ್ತರವಾಗಿ "ಯಾರೂ ಇಲ್ಲ" ಎಂದು ಹೇಳಿದ್ದೀರಿ, ನಾನು "ಇದ್ದಾರೆ" ಎಂದು ಹೇಳಿದರೆ ಒಪ್ಪಿಕೊಳ್ಳುತ್ತೀರಾ ?

*ಶ್ರೀ ಕೆ. ಹನುಮಂತಯ್ಯ.—ನಮಗೆ ಅಧಿಕಾರ ವರ್ಗದವರು "ಇಲ್ಲ" ಎಂದು ತಿಳಿಸಿದ್ದಾರೆ, ನೀವು "ಉಂಟು" ಎಂದು ಹೇಳುತ್ತೀರಿ. ಅದನ್ನು ನಾನು ವಿಚಾರಿಸುತ್ತೇನೆ.

ಶ್ರೀ ಕೆ. ಪಂಚಾಕ್ಷರಯ್ಯ.—ಕೋ-ಆಪರೇಟಿವ್ ಸೊಸೈಟಿಯ ಅಸಿಸ್ಟೆಂಟ್ ರಿಜಿಸ್ಟ್ರಾರ್‌ರವರಿಗೆ 35 ವರ್ಷಗಳಮೇಲೆ service ಆಗಿಲ್ಲವೆ ?

ಶ್ರೀ ಕೆ. ಹನುಮಂತಯ್ಯ.—ಅವರ ಹೆಸರೇನು?

ಶ್ರೀ ಕೆ. ಪಂಚಾಕ್ಷರಯ್ಯ.—ಅವರ ಹೆಸರು ಶ್ರೀ ಶಾಮೇಗೌಡ.

ಶ್ರೀ ಕೆ. ಹನುಮಂತಯ್ಯ.—ವಿಚಾರಿಸುತ್ತೇನೆ.

ಶ್ರೀ ಕೆ. ಪಂಚಾಕ್ಷರಯ್ಯ.—ಎಷ್ಟು ಸಾರಿ ಜೀವದಾನ ಕೊಟ್ಟಿದ್ದೀರಿ ?

ಶ್ರೀ ಕೆ ಹನುಮಂತಯ್ಯ.—ಜೀವದಾನವಾಡುವುದಕ್ಕಾಗುವುದಿಲ್ಲ.

ಶ್ರೀ ಕೆ. ಪಂಚಾಕ್ಷರಯ್ಯ.—Extension ಎಷ್ಟು ಸಾರಿ ಕೊಟ್ಟಿದ್ದೀರಿ ?

ಶ್ರೀ ಕೆ. ಹನುಮಂತಯ್ಯ.—ನೋಟೀಸ್ ಬೇಕು.

ಶ್ರೀ ಕೆ. ಪಂಚಾಕ್ಷರಯ್ಯ.—ಪುನಃ ಅವರು extension ಕೇಳಿದ್ದಾರೆಯೇ ?

ಶ್ರೀ ಕೆ. ಹನುಮಂತಯ್ಯ.—ಅವರು extension ಕೇಳುತ್ತಿದ್ದಾರೆ ಎಂದು ನನ್ನ ಮನಸ್ಸಿನಲ್ಲಿ ಜ್ಞಾಪಕವಿದೆ.

ಶ್ರೀ ಕೆ. ಪಂಚಾಕ್ಷರಯ್ಯ.—ಸುಳ್ಳು ಉತ್ತರ ಒದಗಿಸಿದ್ದಾರೆ, ಇದ್ದರಿಂದ ಅವರಮೇಲೆ ಏನಾದರೂ ಕ್ರಮ ಕೈಗೊಳ್ಳುತ್ತೀರಾ ?

ಶ್ರೀ ಕೆ. ಹನುಮಂತಯ್ಯ.—ಸುಳ್ಳು ಉತ್ತರ ಎಂದು ವ್ಯಕ್ತವಾದರೆ, I will certainly take action.